# ಹಿಗ್ಗುವಿ ಯಾಕೋ ಈ ದೇಹಕ್ಕೆ ಹಿಗ್ಗುವಿ ಯಾಕೊ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
4. **Note:** The lyrics given in Ref. 2 above are similar to that of the singer. But the lyrics are different in the book mentioned in Ref. 1. They are given separately in yellow highlights.

| | |
|---|---|
| ರಾಗ ಭೈರವಿ ತಾಳ ಅಟ್ಟ | ರಾಗ ಮಧ್ಯಮಾವತಿ ತಾಳ ಅಟ್ಟ |
| ಹಿಗ್ಗುವಿ ಯಾಕೋ ಈ ದೇಹಕ್ಕೆ ಹಿಗ್ಗುವಿ ಯಾಕೊ ‖ ಪ ‖ | ಹಿಗ್ಗುವಿ ಯೇಕೋ ಐ ಮನುಜಾ<br>ಹಿಗ್ಗುವಿ ಯೇಕೋ |
| ಹಿಗ್ಗುವ ತಗ್ಗುವ ಮುಗ್ಗುವ ಕುಗ್ಗುವ<br>ಅಗ್ನಿಯೊಳಗೆ ಬಿದ್ದು ದಗ್ಧವಾಗುವ ದೇಹಕ್ಕೆ ‖ ಅಪ ‖ | ಹಿಗ್ಗುವ ತಗ್ಗುವ ಮುಗ್ಗುವ ಕುಗ್ಗುವ<br>ಅಗ್ನಿಯೊಳಗೆ ದಗ್ಧವಾಗುವ ದೇಹಕೆ |
| ಸತಿ ಪುರುಷರು ಕೂಡಿ ರತಿ ಕ್ರೀಡೆಗಳ ಮಾಡಿ<br>ಪತನಾದ ಇಂದ್ರಿಯ ಪ್ರತಿಮೆಯ ದೇಹಕ್ಕೆ ‖ ೧ ‖ | ಸತಿ ಪುರುಷರು ತಮ್ಮ ರತಿ ಕ್ರೀಡೆಗಳ ಮಾಡೆ<br>ಪತವಾದಿಂದ್ರಿಯ ಪ್ರತಿಮೆಯ ದೇಹಕೆ |
| ಆಗದ ಭೋಗಗಳ ಆಗು ಮಾಡುತಲಿದ್ದು<br>ರೋಗ ಬಂದರೆ ಬಿದ್ದು ಹೋಗುವ ದೇಹಕ್ಕೆ ‖ ೨ ‖ | ತೋರುವುದೊಂಬತ್ತು ದಾರಿಯ ಮಲವಾದ<br>ನೀರಿಲ್ಲದಿದ್ದರೆ ನಾರುವ ದೇಹಕೆ |
| ಪರರ ಸೇವೆಯ ಮಾಡಿ ನರಕ ಭಾಜನನಾಗಿ<br>ಮರಳಿ ಮರಳಿ ಬಿದ್ದು ಉರುಳುವ ದೇಹಕ್ಕೆ ‖ ೩ ‖ | ಆಗದ ಭೋಗದ ಆಗು ಮಾಡುತಲಿಪ್ಪ<br>ರೋಗ ಬಂದರೆ ಬಿದ್ದು ಹೋಗುವ ದೇಹಕೆ |
| ಸೋರುವದೊಂಬತ್ತು ಬಾಗಿಲ ಮಲಗಳು<br>ನೀರಿಲ್ಲದಿದ್ದರೆ ನಾರುವ ದೇಹಕ್ಕೆ ‖ ೪ ‖ | ನರರ ಸೇವೆಯ ಮಾಡಿ ನರಕ ಭಾಜನನಾಗಿ<br>ಮರಳಿ ಮರಳಿ ಹುಟ್ಟಿ ನರಳುವ ದೇಹಕೆ |
| ಪುರಂದರ ವಿಠ್ಠಲನ ಚರಣ ಕಮಲಕ್ಕೆ<br>ಎರಗದೆ ತಿರುಗುವ ಗರುವದ ದೇಹಕ್ಕೆ ‖ ೫ ‖ | ಪುರಂದರ ವಿಠ್ಠಲನ ಚರಣ ಕಮಲಕ್ಕೆ<br>ಎರಗದೆ ಇರುತಿಪ್ಪ ಗರುವಿನ ದೇಹಕೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಹಿಗ್ಗುವೆ** – ಹೆಮ್ಮೆ ಪಡುವೆ; ಸಂತೋಷಪಡುವೆ.

**ಹಿಗ್ಗುವ...** – ದೇಹದ ಸ್ವಭಾವವೇ ಬೆಳೆಯುವುದು (ಹಿಗ್ಗುವ), ಬಲಗುಂದುವುದು (ತಗ್ಗುವ), ವಾಸನೆ ಬಡಿಯುವ, ನಾರುವ (ಮುಗ್ಗುವ), ಸೊರಗುವುದು (ಕುಗ್ಗುವ).

**ಪತನಾದ** – ತಂದೆತಾಯಿಯರ ಶುಕ್ರಶೋಣಿತಗಳು ಕೂಡಿ ಅದರಿಂದ ಬಿದ್ದ. ಇಂದ್ರಿಯಗಳಿಗೆ ಆಧಾರವಾದ.

**ಮರಳಿ ಮರಳಿ ಬಿದ್ದು ಉರುಳುವ** – ಮತ್ತೆ ಮತ್ತೆ ಭೂಮಿಗೆ ಬಿದ್ದು (ಸಂಸಾರ ಚಕ್ರದಲ್ಲಿ ಸೇರಿ); ಉರುಳುವ, ಸಾವನ್ನು ಪಡೆಯುವ.

**ಸೋರುವುದೊಂಬತ್ತು...** – ಸಂಸ್ಕೃತದಲ್ಲಿ 'ನವದ್ವಾರೇ ಪುರೇ ದೇಹೀ' ಎನ್ನುವ ಒಕ್ಕಣೆಯ ಕನ್ನಡ ರೂಪ. ಕಣ್ಣುಗಳೆರಡು, ಕಿವಿಗಳೆರಡು, ಮೂಗಿನ ಹೊಳ್ಳೆಗಳೆರಡು, ಬಾಯೊಂದು, ಮೂತ್ರದ್ವಾರ, ಮಲದ್ವಾರ ಹೀಗೆ ದೇಹಕ್ಕೆ ಒಂಬತ್ತು ಬಾಗಿಲುಗಳು.

**ಇಂದ್ರಿಯ ಪ್ರತಿಮೆ** = ಬೇರೆ ದೇಹ

**ಆಗದ** = ಅಪಥ್ಯಕರವಾದ

**Classification:** Keerthane
**Ankita:** purandara vittala
**Location:** NA
**Category:** jeevanoddhara, jeevana darshana
**Sub-Category:** deha, agni, patni, pati, roga, naraka, niru, garva, bagilu, dAri,
**Pravachana:** NA
**Explanation:** NA